ಪ್ರದೇಶಗಳ ಬಿಡುಗಡೆಗೆ ಆದೇಶವನ್ನು ನೀಡದೆ ಇರುವ ಪ್ರಯುಕ್ತ ಕಾಮಗಾರಿಗಳನ್ನು ಪ್ರಾರಂಭಿಸಲು ಸಾಧ್ಯವಾಗಿರುವುದಿಲ್ಲ.

ಈ) ಸರ್ಕಾರದ ಮಟ್ಟದಲ್ಲಿ ಎಲ್ಲಾ ಪ್ರಯತ್ನಗಳು ಮುಂದುವರೆದಿದೆ.

ಉ) ಕೇಂದ್ರ ಸರ್ಕಾರವು ದಿನಾಂಕ:30.4.2002 ರಂದು ನೀಡಿದ್ದ ತಾತ್ವಿಕ ಒಪ್ಪಿಗೆಯನ್ನು ತಡೆಹಿಡಿದುದ್ದರಿಂದ ರಾಜ್ಯ ಸರ್ಕಾರದಿಂದ ಪ್ರಯತ್ನಗಳು ಮುಂದುವರೆದಿದೆ. ವಿಷಯದ ಕುರಿತು ಹಲವಾರು ಅಂತರರಾಜ್ಯ ಸಭೆಗಳು ನಡೆದಿದೆ. ತಡೆಯನ್ನು ಶೀಘ್ರವಾಗಿ ತೆರವುಗೊಳಿಸಬೇಕೆಂದು ಕೋರಿ ಮಾನ್ಯ ಪ್ರಧಾನ ಮಂತ್ರಿಯವರಿಗೆ ಎರಡು ಬಿನ್ನವತ್ತಳೆಗಳನ್ನು ಮಾನ್ಯ ಮುಖ್ಯಮಂತ್ರಿಗಳಿಂದ ಸಲ್ಲಿಸಲಾಗಿದೆ. ಅನೇಕ ಪತ್ರಗಳ ಮೂಲಕ ಮತ್ತು ನವದೆಹಲಿಯ ಭೇಟಿಯ ಸಂದರ್ಭದಲ್ಲಿ ಕೇಂದ್ರದ ಜಲ ಸಂಪನ್ಮೂಲ ಸಚಿವರನ್ನು ಮತ್ತು ಮಾನ್ಯ ಪ್ರಧಾನಮಂತ್ರಿಗಳನ್ನು ತಡೆಯನ್ನು ಶೀಘ್ರವಾಗಿ ತೆರವುಗೊಳಿಸಬೇಕೆಂದು ಒತ್ತಾಯಿಸಲಾಗಿದೆ. ಮೇಲಿನ ವಿಷಯಗಳಂತೆ ಯಾವುದೇ ವಿಳಂಬವು ಆಗುತ್ತಿರುವುದಿಲ್ಲ.

823 (1195) ಶ್ರೀ ಐವಾನ್ ನಿಗ್ಲಿ (ನಾಮಾಂಕಿತ): ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬಹುತೇಕ ಖಾಸಗಿ ಶಾಲಾ ಸಂಸ್ಥೆಗಳು ನರ್ಸರಿ ದಾಖಲಾತಿಗಳು ಒಳಗೊಂಡಂತೆ, ದೊಡ್ಡ ಮೊತ್ತದ ವಂತಿಗೆಗಳನ್ನು ಅಸಹಾಯಕ ಪೋಷಕರಿಂದ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಇಂತಹ ತಪ್ಪಿತಸ್ಥ ಸಂಸ್ಥೆಗಳ ವಿರುದ್ಧ ಸರ್ಕಾರವು ಕೈಗೊಳ್ಳಬಹುದಾದ ಕ್ರಮ ಏನು;

ಇ) ಮಧ್ಯಮ ವರ್ಗದ ಹಾಗೂ ಕೆಳ ಆದಾಯ ವರ್ಗದ ಪೋಷಕರು ತಮ್ಮ ಮಕ್ಕಳಿಗೆ ಒಳ್ಳೆಯ ಶಿಕ್ಷಣವನ್ನು ದೊರಕಿಸಿ ಕೊಡುವ ನಿಟ್ಟಿನಲ್ಲಿ ಇಂತಹ (ವಂತಿಗೆ ಹಾವಳಿ) ವ್ಯವಸ್ಥೆಯನ್ನು ಹೋಗಲಾಡಿಸಲು ಸರ್ಕಾರದ ಪ್ರಸ್ತಾವನೆಯೇನು?

ಶ್ರೀ ಬಿ.ಎಸ್. ಹೊರಟ್ಟಿ (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಸಚಿವರು):

ಅ) ಕೆಲವು ಪ್ರಕರಣಗಳು ಸರ್ಕಾರದ ಗಮನಕ್ಕೆ ಬಂದಿವೆ.

ಆ) ಕರ್ನಾಟಕ ಶಿಕ್ಷಣ ಅಧಿನಿಯಮ, 1983 ಸೆಕ್ಷನ್ 48(1)ರ ಪ್ರಕಾರ ವಂತಿಗೆ ವಸೂಲು ಮಾಡುವುದನ್ನು ನಿಷೇಧಿಸಲಾಗಿದೆ. ಖಾಸಗಿ ಶಿಕ್ಷಣ ಸಂಸ್ಥೆಗಳಲ್ಲಿ ಶುಲ್ಕ ವಸೂಲಿಯನ್ನು ಕ್ರಮಗೊಳಿಸಲು ಸರ್ಕಾರವು ಈ ಕೆಳಕಂಡ ನಿಯಮಗಳನ್ನು ರೂಪಿಸಿದೆ.

1) ಅನುದಾನ ರಹಿತ ಶಾಲೆಗಳಿಗೆ ಹಾಗೂ ಪದವಿ ಪೂರ್ವ ಕಾಲೇಜುಗಳಿಗೆ ಸಂಬಂಧಿಸಿದಂತೆ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಕೆಲವು ಶುಲ್ಕ

ಹಾಗೂ ವಂತಿಗೆ ಕ್ರಮಬದ್ಧತೆ) ನಿಯಮಗಳು 1999 ಮತ್ತು

2) ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ, ನಿಯಂತ್ರಣ ಮತ್ತು ಪಠ್ಯಕ್ರಮ ನಿಗದಿಕರಣ ಇತ್ಯಾದಿ) ನಿಯಮಗಳು, 1995.

ಮೇಲೆ (2)ರಲ್ಲಿ ಉಲ್ಲೇಖಿಸಲಾದ, 1995ರ ನಿಯಮಗಳ ನಿಯಮ 16ರನ್ವಯ ಜಿಲ್ಲಾ ಮಟ್ಟದ ಕ್ರಮಬದ್ಧತೆ ಪ್ರಾಧಿಕಾರವನ್ನು, ಪ್ರತಿಯೊಂದು ಜಿಲ್ಲೆಗಾಗಿ ರಚಿಸಲಾಗಿದೆ. ಶುಲ್ಕ ವಸೂಲಾತಿಗೆ ಸಂಬಂಧಿಸಿದ ನಿಯಮಗಳೂ ಒಳಗೊಂಡಂತೆ, ನಿಯಮಗಳ ಉಲ್ಲಂಘನೆಗೆ ಸಂಬಂಧಿಸಿದ ಪ್ರಕರಣಗಳ ಕುರಿತು ತನಿಖೆ ಮಾಡಲು ಸದರಿ ಪ್ರಾಧಿಕಾರ ಅಧಿಕಾರ ಹೊಂದಿರುತ್ತದೆ. ದೂರಿನ ಆಧಾರದ ಮೇಲೆ ಅಥವಾ ತನ್ನಿಂತಾನೆ (Suo-motu) ಸದರಿ ಪ್ರಾಧಿಕಾರ ತನಿಖೆ ನಡೆಸಿ, ಸಂಬಂಧಿಸಿದ ಸಂಸ್ಥೆಯ ವಿರುದ್ಧ ಆದೇಶ ನೀಡಲು ಅಧಿಕಾರ ಹೊಂದಿರುತ್ತದೆ.

ಇದಲ್ಲದೇ, ಕರ್ನಾಟಕ ಶಿಕ್ಷಣ ಸಂಸ್ಥೆಗಳು (ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಮಾನ್ಯತೆ) ನಿಯಮಗಳು, 1999 ರಡಿ ಮಾನ್ಯತೆ ನವೀಕರಿಸಬೇಕೆಂಬ, ಸಂಬಂಧಿಸಿದ ಸಂಸ್ಥೆಯ ಕೋರಿಕೆಯನ್ನು ಪರಿಗಣಿಸುವ ಸಂದರ್ಭದಲ್ಲಿ ಶುಲ್ಕಕ್ಕೆ ಸಂಬಂಧಿಸಿದ ನಿಯಮಗಳನ್ನು ಪಾಲಿಸಲಾಗಿದೆಯೇ? ಎನ್ನುವ ಬಗ್ಗೆ ಸಕ್ಷಮ ಪ್ರಾಧಿಕಾರ ಪರಿಶೀಲಿಸಿ, ಅದರ ಉಲ್ಲಂಘನೆಯಾದ ಸಂದರ್ಭದಲ್ಲಿ, ಮಾನ್ಯತೆಯನ್ನು ರದ್ದುಪಡಿಸಲು ಅಗತ್ಯ ಕ್ರಮ ತೆಗೆದುಕೊಳ್ಳಲು ಆಸ್ಪದ ಇರುತ್ತದೆ.

ಕರ್ನಾಟಕ ಶಿಕ್ಷಣ ಸಂಸ್ಥೆಗಳು (ವರ್ಗೀಕರಣ ಮತ್ತು ನೋಂದಣಿ) ನಿಯಮಗಳು, 1997 ರಡಿ ನೋಂದಣಿ ಮಾಡಲು ಅದರ ನಿಯಮ 4(4) (iv) ರಲ್ಲಿ ವಿಧಿಸಿದ ಷರತ್ತಿನ ಪ್ರಕಾರ ಶುಲ್ಕಕ್ಕೆ ಸಂಬಂಧಿಸಿದಂತೆ ನಿಯಮಗಳನ್ನು ಆಯಾಯಾ ಶಿಕ್ಷಣ ಸಂಸ್ಥೆ ಪಾಲಿಸತಕ್ಕದ್ದು.

ದಿ: 28.4.2003ರ ಸುತ್ತೋಲೆ ಸಂಖ್ಯೆ ಇಡಿ 117 ಪಿಜಿಸಿ 2003 ರನ್ವಯ ವಂತಿಗೆ ವಸೂಲಾತಿ ತಡೆಗಟ್ಟುವ ಕುರಿತು ಸರ್ಕಾರ ಸೂಚನೆಗಳನ್ನು ನೀಡಿದೆ ಹಾಗೂ ಅದನ್ನು ಇತ್ತೀಚಿನ ದಿ: 23.5.2006ರ ಸುತ್ತೋಲೆ ಸಂಖ್ಯೆ ಇಡಿ 98 ಪಿಜಿಸಿ 2006ರನ್ವಯ ಪುನರುಚ್ಚಿಸಲಾಗಿದೆ.

825 (803) ಶ್ರೀ ಜಯಪ್ರಕಾಶ್ ಹೆಗ್ಡೆ. ಕೆ (ಬ್ರಹ್ಮಾವರ್): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗೆ ದಯವಿಟ್ಟು ಉತ್ತರಿಸುವರೇ?

ಅ) ರಾಜ್ಯದ ವಿವಿಧ ಜಿಲ್ಲೆಗಳಲ್ಲಿ ಕರ್ನಾಟಕ ಗೃಹ ಮಂಡಳಿಯಿಂದ ಹಾಲಿ ಮತ್ತು ಮಾಜಿ ಸಂಸದರು, ಮಾಜಿ ಶಾಸಕರು ಹಾಗೂ ಇತರೆ ಗಣ್ಯ ವ್ಯಕ್ತಿಗಳಿಗೆ ಹಂಚಿಕೆಯಾಗಿರುವ